ಹಾಗೆಂದು ಕರಮಚಂದನು ಆ ಬಿಲ್ಲಿನ ಫೋಟೊವನ್ನು ನನ್ನ ಚರವಾಣಿಗೆ ವರ್ಗಾಯಿಸಿದ. ನನಗೆ ಚೋದ್ಯವೆನಿಸಿತು. ಮರುಮಾತಾಡದೇ ಆತನ ಆದೇಶ ಪಾಲಿಸಿದೆ.

"ಖಾಲಿಯಾಗಿದೆ, ಸಾರ್. ಮುಂದಿನ ವಾರ ಬರುತ್ತೆ." ಮೆಡಿಕಲ್ ಅಂಗಡಿಯವನು ನೀಡಿದ ಈ ಉತ್ತರವನ್ನು ಕರಮಚಂದನಿಗೆ ಫೋನಿಸಿದಾಗ, ಆತ ಒಮ್ಮೆಗೇ 'ಕರೆಕ್ಟ್!' ಅಂತ ಚೀರಿ, ತಾನೀಗಲೇ ಬರ್ತೀನಿ ಅಂತ ಹೇಳಿದ.

ಕೆಲ ನಿಮಿಷಗಳಲ್ಲಿ, ನಾವಿಬ್ಬರೂ ವೈದ್ಯ ಮಹಾದೇವಪ್ಪನೊಡನೆ ಮಾತುಕತೆಯಾಡುತ್ತ ಇದ್ದೆವು.

"ನಿಮ್ಮಿಂದ ಸಹಾಯ ಆಗ್ಬೇಕಿತ್ತು, ಡಾಕ್ಟರ್! ನಿಮ್ಮ ರೋಗಿಯೊಬ್ಬ ವಾಕಿಂಗ್ ಸ್ಟಿಕ್ ಬಿಟ್ಟು ಹೋಗಿದ್ದಾನೆ. ಅದನ್ನು ಆತನಿಗೆ ಮರಳಿಸಬೇಕಿತ್ತು. ಅವ್ನ ವಿವರ ಕೊಡಬಹುದೇ?"

ಕರಮಚಂದನ ನುಡಿಗಳು ಒಗಟಿನಂತೆ ಕಂಡವು. ಆ ಅನಾಮಧೇಯ ಆಸಾಮಿಯು ಮಹಾದೇವಪ್ಪನ ಪೇಷೆಂಟು ಎಂದು ಗೊತ್ತಾಗಿದ್ದು ಹೇಗೆ?

"ಯಾವ ಪೇಷೆಂಟು?"

ಕರಮಚಂದ ಮದ್ದಿನ ಹೆಸರನ್ನು ಆತನ ಎದುರು ಹಿಡಿದ.

"ಇದು ಮೂಳೆ ಸವೆತವಿರುವವರು ನಿತ್ಯ ತೆಗೆದುಕೊಳ್ಳುವ ಔಷಧಿ. ಇದನ್ನ ಖರೀದಿಸಲು ವೈದ್ಯರ ಚೀಟಿ ಬೇಡವೆಂದು ಊಹಿಸಿದೆ. ಆದ್ದರಿಂದ ಆತ ಆಗಾಗ್ಗೆ ಮೂಳೆ ತಜ್ಞರಿಂದ ಸಲಹೆ ಪಡೆಯುತ್ತಿರಲೇಬೇಕೆಂದೂ ಭಾವಿಸಬಹುದು. ಆದರೆ ಆ ವ್ಯಕ್ತಿ ತುಸು ಮೂಲೆಯಲ್ಲಿರುವ ನಾಣಯ್ಯನ ಮೆಡಿಕಲ್ಲಿಗೇ ಯಾಕೆ ಬಂದ? ಆತ ಸಮೀಪದಲ್ಲೆಲ್ಲೋ ಇರುವ ಮೂಳೆ ತಜ್ಞರ ಬಳಿ ಬಂದಿರಬೇಕೆಂದು ಊಹಿಸಿ, ಹುಡುಕಾಡಿದಾಗ, ನಿಮ್ಮ ಹೆಸರು ಕಂಡಿತು. ನಿಮ್ಮ ಕ್ಲಿನಿಕ್ ಬಳಿಯೇ ಮೆಡಿಕಲ್ ಇದೆಯಲ್ಲ. ಅಲ್ಲೇ ಖರೀದಿ ಮಾಡಬಹುದಿತ್ತಲ್ಲ. ಹಾಗಿದ್ರೆ ಅಲ್ಲಿ ಆ ಔಷಧಿ ಲಭ್ಯವಿರಲಿಕ್ಕಿಲ್ಲವೆಂಬ ಎಂಬ ನನ್ನ ಊಹನೆ ನಿಜವಾಯಿತು. ಆದ್ದರಿಂದ ಆತ ನಿಮ್ಮ ಪೇಷೆಂಟೇ ಆಗಿರಬೇಕೆಂದು ಭಾವಿಸಿದೆ." ಕರಮಚಂದನ ಮಾತುಗಳು ನನ್ನ ಗೊಂದಲವನ್ನು ಬಗೆಹರಿಸಿದವು.

"ಓಹ್! ಚಿಪ್ಪಿ ಪೂವಯ್ಯ. ನನ್ನ ಮಾಮುಲು ಪೇಷೆಂಟು. ನಿನ್ನೆ ಕಾಲು ನೋವು ಇದೆ ಅಂತ ಬಂದಿದ್ದ. ಇದೇ ಔಷಧ ಮುಂದುವರೆಸಲು ಹೇಳ್ದೆ. ಅವ್ನು ಮುಂದಿನ ತಿಂಗಳು ಬರಬಹುದಷ್ಟೇ."

"ಆತನ ವಿಳಾಸ ಅಥವಾ ಚರವಾಣಿ ಇದೆಯಾ?"

"ಚರವಾಣಿ ಸಂಖ್ಯೆ ಇಟ್ಟುಕೊಂಡಿಲ್ಲ. ಮನೆ ತೆಲುಗರ ಬೀದಿಯಲ್ಲಿ, ಮಾರಿಯಮ್ಮನ ಗುಡಿ ಹತ್ರ ಇರಬೇಕು."

ಅಲ್ಲಿಂದ ಹೊರಬೀಳುವಾಗ ಕರಮಚಂದ ಉದಾಸೀನದಿಂದ ನುಡಿದ,

"ಬಿದ್ದಪ್ಪ, ಸದ್ಯಕ್ಕೆ ಆ ಚಿಪ್ಪಿ ಪೂವಯ್ಯನ ಹಿಂದೆ ಹೋಗುವ ಪ್ರಮೇಯವೇನೂ ಇಲ್ಲ."

★★★



ಆದರೆ ಮರುದಿನ ಬೆಳಗ್ಗೆ ಹನ್ನೊಂದರ ಹೊತ್ತಿಗೆ ಮತ್ತೆ ನಾಣಯ್ಯ ನಮ್ಮ ಕಚೇರಿಯಲ್ಲಿ ಕಾಣಿಸಿಕೊಂಡಾಗ ಪ್ರಕರಣಕ್ಕೆ ಮರು ಜೀವ ಬಂದಿತು.

"ಸಾರ್, ಬೆಳಗ್ಗೆ ನಮ್ ಸೋದರತ್ತೆ ಫೋನು ಮಾಡಿದ್ರು. ನಮ್ ಸೋದರ ಮಾವ ಜಮ್ಮಾ ಸುಬ್ಬಯ್ಯನವರ ಮೇಲೆ ನಿನ್ನೆ ಸಂಜೆ ಏಳೂವರೆ ಹೊತ್ತಿಗೆ ಯಾರೋ ಹಲ್ಲೆ ಮಾಡಿದ್ದಾರಂತೆ. ಮಾವ ಬಹಳ ಷಾಕ್‌ನಲ್ಲಿದ್ದಾರಂತೆ. ಹಲ್ಲೆ ಮಾಡ್ದವರ ಬಗ್ಗೆ ಏನೂ ಹೇಳ್ತಿಲ್ಲ. ಪೊಲೀಸು ಕಂಪ್ಲೇಂಟೂ ಕೊಡೋದು ಬೇಡ ಅಂತಿದ್ದಾರಂತೆ. ನಾನು ಅವರನ್ನ ನೋಡ್ಕೊಂಡು ಬಂದೆ. ಅವರ ಮೇಲೆ ಹಲ್ಲೆ ಮಾಡ್ದೋನು ಅದ್ಕೆ ಉಪಯೋಗಿಸ್ದ ಕೋಲನ್ನು ಬಿಟ್ಟು ಹೋಗಿದ್ದಾನೆ. ಆ ಕೋಲು ಯಾವ್ದು ಗೊತ್ತಾ ಸಾರ್? ಭಾಳಾ ವಿಚಿತ್ರ. ಅದು ಮೊನ್ನೆ ನಮ್ಮಲ್ಲಿಂದ ಕದ್ದು ಹೋಯ್ತಲ್ಲ, ಅದೇ ವಾಕಿಂಗ್ ಸ್ಟಿಕ್!"